**A**

**CCE RR/PR/PF/ NSR/NSPR**

**FULL SYLLABUS**

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ,

**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD,**
**MALLESHWARAM, BENGALURU – 560 003**

**ಆಗಸ್ಟ್ 2024 ರ ಪರೀಕ್ಷೆ - 3**

**AUGUST 2024 EXAMINATION - 3**

## ಮಾದರಿ ಉತ್ತರಗಳು

## MODEL ANSWERS

**ಸಂಕೇತ ಸಂಖ್ಯೆ : 97-K** | **CODE NO. : 97-K**

# ವಿಷಯ : ರಾಜ್ಯಶಾಸ್ತ್ರ

# Subject : POLITICAL SCIENCE

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಎನ್.ಎಸ್.ಆರ್. / ಎನ್.ಎಸ್.ಪಿ.ಆರ್.)**

**(Regular Repeater / Private Repeater / Private Fresh / NSR / NSPR)**

**ದಿನಾಂಕ : 05. 08. 2024 ]** **[ ಗರಿಷ್ಠ ಅಂಕಗಳು : 80**

**Date : 05. 08. 2024 ]** **[ Max. Marks : 80**

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| **I.** | **ಬಹು-ಆಯ್ಕೆ ಪ್ರಶ್ನೆ (ಕ್ರಮಾಕ್ಷರದೊಂದಿಗಿನ ಪ್ರತಿ ಸರಿಯುತ್ತರಕ್ಕೆ 1 ಅಂಕ) : 10 × 1 = 10** | |
| 1. | ಭಾರತದ ಸಂವಿಧಾನ ಜಾರಿಗೆ ಬಂದದ್ದು<br>(A) 1950 ಜನವರಿ 26 (B) 1949 ನವೆಂಬರ್ 26<br>(C) 1947 ಆಗಸ್ಟ್ 15 (D) 1946 ಡಿಸೆಂಬರ್ 11<br>*ಉತ್ತರ :* (A) 1950 ಜನವರಿ 26 | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 2. | ಡಾ. ಬಿ.ಆರ್. ಅಂಬೇಡ್ಕರ್‌ರವರ ಪ್ರಕಾರ ನಮ್ಮ ಸಂವಿಧಾನದ ಈ ವಿಧಿಯು ಆತ್ಮ ಮತ್ತು ಹೃದಯವಿದ್ದಂತೆ<br>(A) ವಿಧಿ – 01 (B) ವಿಧಿ – 21<br>(C) ವಿಧಿ – 32 (D) ವಿಧಿ – 51<br>***ಉತ್ತರ :*** (C) ವಿಧಿ – 32 | 1 |
| 3. | ರಾಜ್ಯಸಭೆಯ ಸದಸ್ಯರ ಅಧಿಕಾರದ ಅವಧಿ<br>(A) 5 ವರ್ಷಗಳು (B) 6 ವರ್ಷಗಳು<br>(C) 8 ವರ್ಷಗಳು (D) 10 ವರ್ಷಗಳು<br>***ಉತ್ತರ :*** (B) 6 ವರ್ಷಗಳು | 1 |
| 4. | ಸಮಾನ ಕೆಲಸಕ್ಕೆ ಸಮಾನ ವೇತನ ಇದು ಈ ತತ್ವವಾಗಿದೆ<br>(A) ಸಮಾಜವಾದಿ ತತ್ವ (B) ಗಾಂಧಿವಾದಿ ತತ್ವ<br>(C) ಉದಾರವಾದಿ ತತ್ವ (D) ಮಾನವತಾವಾದಿ ತತ್ವ<br>***ಉತ್ತರ :*** (A) ಸಮಾಜವಾದಿ ತತ್ವ | 1 |
| 5. | ನಮ್ಮ ಸಂವಿಧಾನದ ರಕ್ಷಕ<br>(A) ರಾಷ್ಟ್ರಪತಿ (B) ಪ್ರಧಾನ ಮಂತ್ರಿ<br>(C) ಸಂಸತ್ತು (D) ಸರ್ವೋಚ್ಚ ನ್ಯಾಯಾಲಯ<br>***ಉತ್ತರ :*** (D) ಸರ್ವೋಚ್ಚ ನ್ಯಾಯಾಲಯ | 1 |
| 6. | ರಾಜ್ಯಪಾಲರನ್ನು ನೇಮಕ ಮಾಡುವವರು<br>(A) ಪ್ರಧಾನ ಮಂತ್ರಿ (B) ರಾಷ್ಟ್ರಪತಿ<br>(C) ಉಪರಾಷ್ಟ್ರಪತಿ (D) ರಾಜ್ಯದ ಮುಖ್ಯ ನ್ಯಾಯಾಧೀಶರು<br>***ಉತ್ತರ :*** (B) ರಾಷ್ಟ್ರಪತಿ | 1 |
| 7. | ರಾಜ್ಯ ಶಾಸಕಾಂಗದ ಕೆಳಮನೆ<br>(A) ವಿಧಾನಸಭೆ (B) ವಿಧಾನ ಪರಿಷತ್ತು<br>(C) ವಿಧಾನ ಮಂಡಲ (D) ವಿಧಾನಸೌಧ<br>***ಉತ್ತರ :*** (A) ವಿಧಾನಸಭೆ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 8. | ಒಂದು ರಾಜ್ಯದೊಳಗಿನ ಅತ್ಯುನ್ನತ ನ್ಯಾಯಾಲಯ<br>(A) ಲೋಕ ಅದಾಲತ್ (B) ಸೆಷನ್ಸ್ ನ್ಯಾಯಾಲಯ<br>(C) ಉಚ್ಚ ನ್ಯಾಯಾಲಯ (D) ಸಿವಿಲ್ ನ್ಯಾಯಾಲಯ<br>***ಉತ್ತರ :*** (C) ಉಚ್ಚ ನ್ಯಾಯಾಲಯ | 1 |
| 9. | ಪಂಚಾಯತ್‌ರಾಜ್ ವ್ಯವಸ್ಥೆಯ ಬೆನ್ನೆಲುಬು<br>(A) ಗ್ರಾಮಪಂಚಾಯಿತಿ (B) ತಾಲ್ಲೂಕ್ ಪಂಚಾಯಿತಿ<br>(C) ಗ್ರಾಮಸಭೆ (D) ಜಿಲ್ಲಾ ಪಂಚಾಯಿತಿ<br>***ಉತ್ತರ :*** (C) ಗ್ರಾಮಸಭೆ | 1 |
| 10. | ಕರ್ನಾಟಕ ಲೋಕಸೇವಾ ಆಯೋಗದ ಕೇಂದ್ರ ಕಚೇರಿ ಇರುವ ಸ್ಥಳ<br>(A) ಬೆಳಗಾವಿ (B) ಕಲಬುರ್ಗಿ<br>(C) ಮೈಸೂರು (D) ಬೆಂಗಳೂರು<br>***ಉತ್ತರ :*** (D) ಬೆಂಗಳೂರು | 1 |
| **II.** | ***A*-ಪಟ್ಟಿಯ ಅಂಶಗಳನ್ನು *B*-ಪಟ್ಟಿಯ ಅಂಶಗಳೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ : 5 × 1 = 5** | |
| 11. | ***A*-ಪಟ್ಟಿ** — ***B*-ಪಟ್ಟಿ**<br>(A) ರಾಷ್ಟ್ರಪತಿ — (i) ರಾಜ್ಯಸಭೆಯ ಮುಖ್ಯಸ್ಥರು<br>(B) ಉಪರಾಷ್ಟ್ರಪತಿ — (ii) ರಾಷ್ಟ್ರದ ಮುಖ್ಯಸ್ಥರು<br>(C) ಪ್ರಧಾನ ಮಂತ್ರಿ — (iii) ಸಂಪುಟದರ್ಜೆ ಮಂತ್ರಿಗೆ ಸಹಾಯಕ ಮಂತ್ರಿ<br>(D) ಸಭಾಪತಿ — (iv) ಕೇಂದ್ರ ಸರ್ಕಾರದ ಮುಖ್ಯಸ್ಥರು<br>(E) ಉಪ ಮಂತ್ರಿ — (v) ಲೋಕಸಭೆಯ ಮುಖ್ಯಸ್ಥರು<br>(vi) ಸಂಪುಟದರ್ಜೆ ಮತ್ತು ರಾಜ್ಯದರ್ಜೆ ಸಚಿವರಿಗೆ ಸಹಾಯಕರು<br>(vii) ರಾಜ್ಯದರ್ಜೆ ಮಂತ್ರಿಗೆ ಸಹಾಯಕ ಮಂತ್ರಿ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | ***ಉತ್ತರ :*** | |
| | ***A*-ಪಟ್ಟಿ** — ***B*-ಪಟ್ಟಿ** | |
| | (A) ರಾಷ್ಟ್ರಪತಿ — (ii) ರಾಷ್ಟ್ರದ ಮುಖ್ಯಸ್ಥರು | |
| | (B) ಉಪರಾಷ್ಟ್ರಪತಿ — (i) ರಾಜ್ಯಸಭೆಯ ಮುಖ್ಯಸ್ಥರು | |
| | (C) ಪ್ರಧಾನ ಮಂತ್ರಿ — (iv) ಕೇಂದ್ರ ಸರ್ಕಾರದ ಮುಖ್ಯಸ್ಥರು | |
| | (D) ಸಭಾಪತಿ — (v) ಲೋಕಸಭೆಯ ಮುಖ್ಯಸ್ಥರು | |
| | (E) ಉಪ ಮಂತ್ರಿ — (vi) ಸಂಪುಟದರ್ಜೆ ಮತ್ತು ರಾಜ್ಯದರ್ಜೆ ಸಚಿವರಿಗೆ ಸಹಾಯಕರು | 5 |
| **III.** | **ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ಪದ / ವಾಕ್ಯದಲ್ಲಿ ಉತ್ತರ ಬರೆಯಿರಿ : 15 × 1 = 15** | |
| 12. | ಭಾರತದ ಸಂವಿಧಾನದ ರಚನಾ ಸಭೆಯಲ್ಲಿ ಧ್ಯೇಯಗಳ ನಿರ್ಣಯವನ್ನು ಮಂಡಿಸಿದವರು ಯಾರು ? | |
| | ***ಉತ್ತರ :*** | |
| | ಜವಾಹರ್‌ಲಾಲ್ ನೆಹರೂ | 1 |
| 13. | ಏಕ ಪೌರತ್ವವನ್ನು ಅರ್ಥೈಸಿ. | |
| | ***ಉತ್ತರ :*** | |
| | ದೇಶದೊಳಗಿನ ನಾಗರೀಕನಿಗಿರುವ ಏಕಮಾತ್ರ ರಾಷ್ಟ್ರೀಯ ಪೌರತ್ವವೇ ಏಕಪೌರತ್ವ. | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 14. | 'ಆಸ್ತಿ ಹಕ್ಕ'ನ್ನು ನಮ್ಮ ಸಂವಿಧಾನದ ಮೂಲಭೂತ ಹಕ್ಕುಗಳ ಪಟ್ಟಿಯಿಂದ ತೆಗೆದುಹಾಕಿದ್ದು ಯಾವಾಗ ?<br>***ಉತ್ತರ :***<br>1978 | 1 |
| 15. | ಮೂಲಭೂತ ಕರ್ತವ್ಯಗಳನ್ನು ಭಾರತದ ಸಂವಿಧಾನದಲ್ಲಿ ಅಳವಡಿಸಿಕೊಳ್ಳಲು ಪ್ರಭಾವಬೀರಿದ ದೇಶ ಯಾವುದು ?<br>***ಉತ್ತರ :***<br>USSR (ರಷ್ಯಾ) | 1 |
| 16. | ಮಾಹಿತಿ ಹಕ್ಕು ಕಾಯ್ದೆ ಜನರಿಗೆ ತುಂಬಾ ಸಹಕಾರಿಯಾಗಿದೆ. ಹೇಗೆ ?<br>***ಉತ್ತರ :***<br>— ಇದು ಭ್ರಷ್ಟಚಾರ ನಿಯಂತ್ರಿಸುವಲ್ಲಿ ಮತ್ತು ಆಡಳಿತದಲ್ಲಿ ಪಾರದರ್ಶಕತೆ ಹೆಚ್ಚಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತದೆ.<br>— ಕಾನೂನಿನ ನ್ಯೂನ್ಯತೆಗಳನ್ನು ಸರಿಪಡಿಸುವಲ್ಲಿ ಮಾಹಿತಿಹಕ್ಕು ಕಾಯ್ದೆ ಸಹಕಾರಿಯಾಗಿದೆ.<br>— ಪ್ರಜಾಪ್ರಭುತ್ವದ ದಕ್ಷತೆ, ಪಾರದರ್ಶಕತೆ ಮತ್ತು ಪ್ರಭುದ್ಧತೆಯನ್ನು ಹೆಚ್ಚಿಸಿ ಪ್ರಜಾಭಿವೃದ್ಧಿಗೆ ನೆರವಾಗಿದೆ.<br>(ಯಾವುದಾದರೂ ಒಂದು ಅಂಶ) | 1 |
| 17. | ಗಾಂಧಿವಾದ ತತ್ವಗಳೆಂದರೇನು ?<br>***ಉತ್ತರ :***<br>ಗಾಂಧೀಜಿಯವರ ಪ್ರಭಾವದಿಂದ ಮೂಡಿಬಂದ ತತ್ವಗಳಾಗಿವೆ. | 1 |
| 18. | ರಾಷ್ಟ್ರದಲ್ಲಿ ತುರ್ತುಪರಿಸ್ಥಿತಿ ಘೋಷಿಸುವ ಅಧಿಕಾರವನ್ನು ಹೊಂದಿರುವವರು ಯಾರು ?<br>***ಉತ್ತರ :***<br>ರಾಷ್ಟ್ರಪತಿ | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 19. | ಶೂನ್ಯವೇಳೆ ಎಂದರೇನು ?<br>***ಉತ್ತರ :***<br>ಅಧಿವೇಶನ ನಡೆಯುವ ಸಂದರ್ಭದಲ್ಲಿ ಮಧ್ಯಾಹ್ನ 12 ಗಂಟೆಯಿಂದ ಊಟದ ಸಮಯದವರೆಗಿನ ನಡುವಿನ ಅವಧಿಯೇ ಶೂನ್ಯವೇಳೆ. | 1 |
| 20. | ಅವಿಶ್ವಾಸ ನಿರ್ಣಯ ಯಾವಾಗ ಮಂಡಿಸಬಹುದು ?<br>***ಉತ್ತರ :***<br>ಮಂತ್ರಿಮಂಡಲವು ಸಮರ್ಪಕವಾಗಿ ಆಡಳಿತ ನಡೆಸದೆ ಇದ್ದಾಗ ಅವಿಶ್ವಾಸ ನಿರ್ಣಯ ಮಂಡಿಸಬಹುದು. | 1 |
| 21. | ರಾಜ್ಯಸಭೆಯು ಹಣಕಾಸು ಮಸೂದೆಯನ್ನು ಎಷ್ಟು ದಿನಗಳವರೆಗೆ ತಡೆಹಿಡಿಯಬಹುದು ?<br>***ಉತ್ತರ :***<br>14 ದಿನಗಳು | 1 |
| 22. | ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ಪ್ರಮಾಣವಚನ ಬೋಧಿಸುವವರು ಯಾರು ?<br>***ಉತ್ತರ :***<br>ರಾಷ್ಟ್ರಪತಿ | 1 |
| 23. | ರಾಜ್ಯದ ಅಡ್ವೊಕೇಟ್ ಜನರಲ್‌ಗಳನ್ನು ನೇಮಕ ಮಾಡುವವರು ಯಾರು ?<br>***ಉತ್ತರ :***<br>ರಾಜ್ಯಪಾಲರು | 1 |
| 24. | ಕಂದಾಯ ನ್ಯಾಯಾಲಯದ ಮುಖ್ಯ ಕಾರ್ಯವೇನು ?<br>***ಉತ್ತರ :***<br>ಭೂಕಂದಾಯ ದಾಖಲೆಗಳ ಸಂರಕ್ಷಣೆ, ತೆರಿಗೆ ವಸೂಲಾತಿ ಮತ್ತು ಜಮಾಬಂಧಿಗೆ ಸಂಬಂಧಿಸಿದ ಪ್ರಕರಣಗಳನ್ನು ಇತ್ಯರ್ಥಗೊಳಿಸುತ್ತದೆ. | 1 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 25. | ಜನತಾ ನ್ಯಾಯಾಲಯಗಳನ್ನು ಸ್ಥಾಪಿಸಿರುವುದು.ಏಕೆ ?<br>***ಉತ್ತರ :***<br>— ನ್ಯಾಯ ವಿತರಣೆಯಲ್ಲಿ ಆಗುತ್ತಿರುವ ವಿಳಂಬ ತಪ್ಪಿಸಲು<br>— ರಾಜಿ ಸಂಧಾನ ಏರ್ಪಡಿಸಲು<br>(ಯಾವುದಾದರೂ ಒಂದು ಅಂಶ) | 1 |
| 26. | ಮಹಾನಗರ ಪಾಲಿಕೆಯ ಸದಸ್ಯರನ್ನು ಏನೆಂದು ಕರೆಯುತ್ತಾರೆ ?<br>***ಉತ್ತರ :***<br>ಕಾರ್ಪೋರೇಟರ್ | 1 |
| IV. | **ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : 14 × 2 = 28** | |
| 27. | ನಮ್ಯ ಸಂವಿಧಾನ ಮತ್ತು ಅನಮ್ಯ ಸಂವಿಧಾನಕ್ಕಿರುವ ವ್ಯತ್ಯಾಸಗಳನ್ನು ತಿಳಿಸಿ.<br>***ಉತ್ತರ :*** | |

| ನಮ್ಯ ಸಂವಿಧಾನ | ಅನಮ್ಯ ಸಂವಿಧಾನ |
|---|---|
| — ತಿದ್ದುಪಡಿ ವಿಧಾನಗಳ ಆಧಾರದ ಮೇಲೆ ಸುಲಭವಾಗಿ ತಿದ್ದುಪಡಿ ಮಾಡುವ ಸಂವಿಧಾನ | — ತಿದ್ದುಪಡಿ ವಿಧಾನಗಳ ಆಧಾರದ ಮೇಲೆ ಸುಲಭವಾಗಿ ತಿದ್ದುಪಡಿ ಮಾಡಲಾಗದ ಸಂವಿಧಾನ |
| — ಭಾರತದ ಸಂವಿಧಾನ ಭಾಗಶಃ ನಮ್ಯ | — ಭಾರತದ ಸಂವಿಧಾನ ಭಾಗಶಃ ಅನಮ್ಯ |

2

| | | |
|---|---|---|
| 28. | ನ್ಯಾಯದ ವಿಧಗಳನ್ನು ಹೆಸರಿಸಿ.<br>***ಉತ್ತರ :***<br>— ಸಾಮಾಜಿಕ ನ್ಯಾಯ<br>— ಆರ್ಥಿಕ ನ್ಯಾಯ<br>— ರಾಜಕೀಯ ನ್ಯಾಯ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 29. | ನಮ್ಮ ಸಂವಿಧಾನದ ಪ್ರಸ್ತಾವನೆಯ ಮಹತ್ವವನ್ನು ಸಂಕ್ಷಿಪ್ತವಾಗಿ ತಿಳಿಸಿ.<br>***ಉತ್ತರ :***<br>— ಪ್ರಸ್ತಾವನೆ ಸಂವಿಧಾನದ ಭಾಗವಾಗಿದೆ<br>— ರಾಜ್ಯಾಡಳಿತದ ನೀಲಿನಕ್ಷೆ<br>— ಸಂವಿಧಾನದ ಸತ್ವ<br>— ರಾಷ್ಟ್ರವೊಂದರ ತತ್ವಚಿಂತನೆ<br>— ಧ್ಯೇಯ ಗುರಿಗಳ ಕನ್ನಡಿ<br>— ಸಂವಿಧಾನದ ಒಡವೆ | 2 |
| 30. | ಮೂಲಭೂತ ಹಕ್ಕುಗಳ ಗುಣಲಕ್ಷಣಗಳನ್ನು ತಿಳಿಸಿ.<br>***ಉತ್ತರ :***<br>— ನಿರಂಕುಶವಾದವುಗಳು<br>— ಅನುಷ್ಠಾನ ಯೋಗ್ಯವಾದವುಗಳು<br>— ನ್ಯಾಯ ನಿರ್ದೇಶಿತವಾದವುಗಳು<br>— ನಿರ್ಬಂಧಿತವಾದವುಗಳು | 2 |
| 31. | ರಾಜ್ಯನೀತಿ ನಿರ್ದೇಶಕ ತತ್ವಗಳ ಆಧಾರದಲ್ಲಿ ಜಾರಿಗೆ ತಂದಿರುವ ಕಾರ್ಯಕ್ರಮಗಳು ಯಾವುವು ?<br>***ಉತ್ತರ :***<br>— ಭೂ ಸುಧಾರಣೆಯ ಜಾರಿ<br>— ಪಂಚಾಯತ್ ರಾಜ್ ಸ್ಥಾಪನೆ<br>— ಸಮಾನ, ಕೆಲಸಕ್ಕೆ ಸಮಾನ ವೇತನ<br>— ಉಚಿತ ಮತ್ತು ಕಾಡ್ಡಾಯ ಶಿಕ್ಷಣ ಜಾರಿ | 2 |
| 32. | ಸಂಸತ್ತಿನ ಎರಡು ಸದನಗಳು ಯಾವುವು ?<br>***ಉತ್ತರ :***<br>— ರಾಜ್ಯಸಭೆ<br>— ಲೋಕಸಭೆ | 2 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 33. | ರಾಷ್ಟ್ರಪತಿ ರಾಜ್ಯಸಭೆಗೆ ಯಾವ ಕ್ಷೇತ್ರಗಳಲ್ಲಿ ವಿಶಿಷ್ಟ ಸಾಧನೆ ಮಾಡಿದವರನ್ನು ನಾಮಕರಣ ಮಾಡುತ್ತಾರೆ ?<br>***ಉತ್ತರ :***<br>ರಾಷ್ಟ್ರಪತಿಗಳು ರಾಜ್ಯಸಭೆಗೆ ಕಲೆ, ವಿಜ್ಞಾನ, ಸಾಹಿತ್ಯ ಸಮಾಜಸೇವಾ ಕ್ಷೇತ್ರಗಳಲ್ಲಿ ಪರಿಣತಿ, ಅನುಭವ ಜ್ಞಾನ ಪಡೆದಂತಹ 12 ಜನ ಸದಸ್ಯರನ್ನು ನಾಮಕರಣ ಮಾಡುತ್ತಾರೆ. | 2 |
| 34. | ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಲು ಇರುವ ಅರ್ಹತೆಗಳು ಯಾವುವು ?<br>***ಉತ್ತರ :***<br>— ಭಾರತದ ಪ್ರಜೆಯಾಗಿರಬೇಕು<br>— ಕನಿಷ್ಠ 5 ವರ್ಷ ಉಚ್ಚ ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿ ಸೇವೆ ಸಲ್ಲಿಸಿರಬೇಕು<br>— ಕನಿಷ್ಠ 10 ವರ್ಷ ಉಚ್ಚ ನ್ಯಾಯಾಲಯದಲ್ಲಿ ವಕೀಲರಾಗಿ ಸೇವೆ ಸಲ್ಲಿಸಿರಬೇಕು<br>— ರಾಷ್ಟ್ರಪತಿ ದೃಷ್ಟಿಯಲ್ಲಿ ಕಾನೂನು ತಜ್ಞರೆಂದು ಪರಿಗಣಿಸಲ್ಪಟ್ಟಿರಬೇಕು | 2 |
| 35. | ಸರ್ವೋಚ್ಚ ನ್ಯಾಯಾಲಯದ ಮೂಲ ಅಧಿಕಾರಗಳನ್ನು ತಿಳಿಸಿ.<br>***ಉತ್ತರ :***<br>— ನೇರವಾಗಿ ಹೂಡಲಾದ ಮೊಕದ್ದಮೆಗಳನ್ನು ಇತ್ಯರ್ಥಪಡಿಸುವುದು<br>— ಮೂಲಭೂತ ಹಕ್ಕುಗಳ ಉಲ್ಲಂಘನೆ ವಿವಾದಗಳ ದಾವೆ<br>— ರಾಷ್ಟ್ರಪತಿ ಮತ್ತು ಉಪರಾಷ್ಟ್ರಪತಿಗಳ ಚುನಾವಣಾ ವಿವಾದಗಳು<br>— ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ವಿವಾದಗಳು | 2 |
| 36. | ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯ ಅಗತ್ಯತೆಯನ್ನು ತಿಳಿಸಿ.<br>***ಉತ್ತರ :***<br>— ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ ವಿಷಯಗಳ ಮೇಲೆ ಒಬ್ಬ ವ್ಯಕ್ತಿ, ಸಂಘಟನೆ ಅಥವಾ ಸಂಸ್ಥೆ ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ದಾಖಲು ಮಾಡುವುದೇ ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಇದು ಸಾಮಾಜಿಕ ಪರಿವರ್ತನೆಯ ನ್ಯಾಯಿಕ ಸಾಧನವಾಗಿದೆ.<br>— ಉದಾ. : ಭಯೋತ್ಪಾದನೆ, ವಾಯುಮಾಲಿನ್ಯ, ರಸ್ತೆ ಸಂರಕ್ಷಣೆ, ಪರಿಸರ ರಕ್ಷಣೆ ಮುಂತಾದ ವಿಷಯಗಳಲ್ಲಿ ಜನರ ಹಿತರಕ್ಷಣೆಗಾಗಿ ಮೊಕದ್ದಮೆ ಹೂಡಬಹುದು.<br>— ಈ ರೀತಿಯಾಗಿ ಅಗತ್ಯತೆಯನ್ನು ಹೊಂದಿದೆ. | 2 |
| 37. | ಉದಾರವಾದಿ ತತ್ವಗಳಿಗೆ ಎರಡು ಉದಾಹರಣೆ ಕೊಡಿ.<br>**ಉತ್ತರ :**<br>— ಏಕರೂಪ ನಾಗರೀಕ ಸಂಹಿತೆ ಜಾರಿ<br>— ನ್ಯಾಯಾಂಗವನ್ನು ಕಾರ್ಯಾಂಗದಿಂದ ಬೇರ್ಪಡಿಸುವುದು<br>— ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣ<br>— ಅಂತಾರಾಷ್ಟ್ರೀಯ ಶಾಂತಿ ಸೌಹಾರ್ದತೆ ಬೆಳೆಸುವುದು<br>— ಐತಿಹಾಸಿಕ ಸ್ಮಾರಕ ಮತ್ತು ವಸ್ತುಗಳ ಸಂರಕ್ಷಣೆ | 2 |
| 38. | ವಿಧಾನ ಪರಿಷತ್ ಸದಸ್ಯರನ್ನು ಆಯ್ಕೆ ಮಾಡುವ ವಿಧಾನವನ್ನು ತಿಳಿಸಿ.<br>**ಉತ್ತರ :**<br>— 1/3 ಅಂದರೆ 25 ರಷ್ಟು ಸದಸ್ಯರು ವಿಧಾನಸಭೆ ಸದಸ್ಯರಿಂದ ಚುನಾಯಿಸಲಾಗುತ್ತದೆ<br>— 1/3 ಅಂದರೆ 25 ರಷ್ಟು ಸದಸ್ಯರು ಸ್ಥಳೀಯ ಸಂಸ್ಥೆಗಳಿಂದ<br>— 1/12 ಅಂದರೆ 7 ರಷ್ಟು ಸದಸ್ಯರು ಶಿಕ್ಷಕರ ಕ್ಷೇತ್ರದಿಂದ<br>— 1/12 ಅಂದರೆ 7 ರಷ್ಟು ಸದಸ್ಯರು ಪದವೀಧರ ಕ್ಷೇತ್ರದಿಂದ<br>— 1/6 ಅಂದರೆ 7 ರಷ್ಟು ರಾಜ್ಯಪಾಲರು ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವವರನ್ನು ನಾಮಕರಣ ಮಾಡುತ್ತಾರೆ | 2 |
| 39. | ವಿಧಾನಸಭೆಯ ಸಭಾಧ್ಯಕ್ಷರ ಅಧಿಕಾರ ಮತ್ತು ಕಾರ್ಯಗಳು ಯಾವುವು ?<br>**ಉತ್ತರ :**<br>— ವಿಧಾನಸಭೆಯ ಅಧ್ಯಕ್ಷತೆವಹಿಸಿ ಸದನದ ಕಾರ್ಯ ಕಲಾಪಗಳನ್ನು ನಡೆಸುವುದು<br>— ಸದನದಲ್ಲಿ ಶಾಂತಿ ಮತ್ತು ಶಿಸ್ತು ಕಾಪಾಡುವುದು | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಸದನದ ಘನತೆ ಮತ್ತು ಗೌರವ ಕಾಪಾಡುವುದು<br>— ಸದನವನ್ನು ತಾತ್ಕಾಲಿಕವಾಗಿ ಮುಂದೂಡುವುದು ಅಥವಾ ರದ್ದುಪಡಿಸುವುದು<br>— ಗೌರವ ನೀಡದ ಸದಸ್ಯರ ವಿರುದ್ಧ ಕ್ರಮ ಜರುಗಿಸುವುದು<br>— ಮಸೂದೆ ಯಾವುದೆಂದು ನಿರ್ಧರಿಸುವುದು<br>— ಸಮ ಪ್ರಮಾಣದ ಮತಗಳು ಬಂದಾಗ ನಿರ್ಣಾಯಕ ಮತ ಚಲಾಯಿಸುವುದು | 2 |
| 40. | ಜಂಟಿ ಲೋಕಸೇವಾ ಆಯೋಗ ಕುರಿತು ಲಘು ಟಿಪ್ಪಣಿ ಬರೆಯಿರಿ.<br>***ಉತ್ತರ :***<br>— ಎರಡು ಅಥವಾ ಹೆಚ್ಚಿನ ರಾಜ್ಯಗಳು ಒಟ್ಟು ಸೇರಿ ಜಂಟಿ ಲೋಕಸೇವಾ ಆಯೋಗ ಅಂಗೀಕರಿಸಬಹುದು<br>— ಈಶಾನ್ಯ ರಾಜ್ಯಗಳಾದ ಅಸ್ಸಾಂ, ಸಿಕ್ಕಿಂ, ಮೇಘಾಲಯ, ತ್ರಿಪುರ, ಅರುಣಾಚಲ ಪ್ರದೇಶ, ನಾಗಾಲ್ಯಾಂಡ್, ಮಿಜೋರಾಂಗಳಿಗೆ ಜಂಟಿ ಲೋಕಸೇವಾ ಆಯೋಗ ರಚನೆಯಾಗಿದೆ.<br>— ಇದು ಅಸ್ಸಾಂ ರಾಜ್ಯದ ರಾಜಧಾನಿ ಗೌಹತಿ – ದಿಸ್‌ಪುರದಲ್ಲಿದೆ. | 2 |
| **V.** | **ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : $6 \times 3 = 18$** | |
| 41. | ಭಾರತದ ಸಂವಿಧಾನದ ಪ್ರಧಾನ ಲಕ್ಷಣಗಳನ್ನು ವಿವರಿಸಿ.<br>***ಉತ್ತರ :***<br>— ಲಿಖಿತ ಮತ್ತು ಬೃಹತ್ ಸಂವಿಧಾನ<br>— ನಮ್ಯ ಮತ್ತು ಅನಮ್ಯ<br>— ಮೂಲಭೂತ ಹಕ್ಕುಗಳು<br>— ಮೂಲಭೂತ ಕರ್ತವ್ಯಗಳು<br>— ರಾಜ್ಯನೀತಿ ನಿರ್ದೇಶಕ ತತ್ವಗಳು<br>— ಸಂಸದಿಯ ಮಾದರಿ ಸರ್ಕಾರ<br>— ಏಕಾತ್ಮಕ ಚೌಕಟ್ಟಿನೊಳಗೆ ಸಂಯುಕ್ತ ವ್ಯವಸ್ಥೆ | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ಸ್ವತಂತ್ರ ನ್ಯಾಯಾಂಗ<br>— ಏಕ ಪೌರತ್ವ<br>— ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ<br>(ಯಾವುದಾದರೂ ಆರು ಅಂಶಗಳು) | 3 |
| 42. | ಲೋಕಸಭೆಯ ಸದಸ್ಯರಾಗಲು ಇರಬೇಕಾದ ಅರ್ಹತೆಗಳೇನು ?<br>***ಉತ್ತರ :***<br>— ಭಾರತದ ಪ್ರಜೆಯಾಗಿರಬೇಕು<br>— 25 ವರ್ಷ ವಯಸ್ಸು ಆಗಿರಬೇಕು<br>— ಕೇಂದ್ರ ಮತ್ತು ರಾಜ್ಯ ಸರ್ಕಾರದ ಯಾವುದೇ ಲಾಭದಾಯಕ ಹುದ್ದೆಯಲ್ಲಿರಬಾರದು<br>— ಅಪರಾಧಿ ಅಥವಾ ದಿವಾಳಿ / ಮಾನಸಿಕವಾಗಿ ಅಸ್ವಸ್ಥರಾಗಿರಬಾರದು<br>— ಸಂಸತ್ತು ಕಾಲಕಾಲಕ್ಕೆ ನಿರ್ಧರಿಸುವ ಅರ್ಹತೆಗಳನ್ನು ಹೊಂದಿರಬೇಕು | 3 |
| 43. | ರಾಜ್ಯನೀತಿ ನಿರ್ದೇಶಕ ತತ್ವಗಳು ಮತ್ತು ಮೂಲಭೂತ ಹಕ್ಕುಗಳಿಗೆ ಇರುವ ವ್ಯತ್ಯಾಸಗಳನ್ನು ತಿಳಿಸಿ.<br>***ಉತ್ತರ :*** | |

| ರಾಜ್ಯ ನೀತಿ ನಿರ್ದೇಶಕ ತತ್ವಗಳು | ಮೂಲಭೂತ ಹಕ್ಕುಗಳು |
|---|---|
| — ಸಕಾರಾತ್ಮಕವಾದವುಗಳು | — ನಕಾರಾತ್ಮಕವಾದವುಗಳು |
| — ನ್ಯಾಯ ನಿರ್ದೇಶಿತವಾಗಿರುವುದಿಲ್ಲ | — ನ್ಯಾಯಾರ್ಹವಾಗಿದೆ |
| — ಸಮಾಜ ಕೇಂದ್ರಿತವಾಗಿವೆ | — ವ್ಯಕ್ತಿ ಕೇಂದ್ರಿತವಾಗಿವೆ |
| — ಸಾಮಾಜಿಕ ಮತ್ತು ಆರ್ಥಿಕ ಸಂವರ್ಧನೆಗೆ ಪೂರಕ | — ರಾಜಕೀಯ ಪ್ರಜಾಪ್ರಭುತ್ವ ಅಭಿವೃದ್ಧಿಗೆ ಪೂರಕ |
| — ಸರ್ಕಾರದ ನಿರ್ದೇಶಕ ಗುರಿಗಳಾಗಿವೆ | — ನಿರ್ದೇಶಿತ ಗುರಿಗಳ ಸಾಧನಗಳಾಗಿವೆ |
| — ಸಂವಿಧಾನದ 4ನೇ ಭಾಗದಲ್ಲಿ ಇವೆ. | — ಸಂವಿಧಾನದ 3ನೇ ಭಾಗದಲ್ಲಿ ಇವೆ. |

3

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| 44. | ಮುಖ್ಯಮಂತ್ರಿಯ ಅಧಿಕಾರ ಮತ್ತು ಕಾರ್ಯಗಳನ್ನು ವಿವರಿಸಿ.<br>***ಉತ್ತರ :***<br>— ರಾಜ್ಯ ಸರ್ಕಾರದ ಮುಖ್ಯಸ್ಥರು<br>— ಮಂತ್ರಿಮಂಡಲ ಸಭೆಗಳ ಅಧ್ಯಕ್ಷತೆ ವಹಿಸುತ್ತಾರೆ<br>— ರಾಜ್ಯ ಆಡಳಿತದ ಎಲ್ಲಾ ವ್ಯವಹಾರಗಳನ್ನು ರಾಜ್ಯಪಾಲರಿಗೆ ತಿಳಿಸುತ್ತಾರೆ<br>— ಮಂತ್ರಿಗಳು ಮತ್ತು ರಾಜ್ಯಪಾಲರ ನಡುವೆ ಸಂಪರ್ಕ ಸೇತುವೆ<br>— ಖಾತೆಗಳ ಹಂಚಿಕೆ ಮತ್ತು ಬದಲಾವಣೆ<br>— ವಿವಿಧ ಇಲಾಖೆಗಳ ನಡುವೆ ಸಹಕಾರ, ಸಾಮರಸ್ಯದ ಕೊಂಡಿಯಾಗಿ ಕಾರ್ಯನಿರ್ವಹಿಸುತ್ತಾರೆ.<br>— ವಿಧಾನಸಭೆ ವಿಸರ್ಜನೆ ಶಿಫಾರಸ್ಸು ಮಾಡುವ ಅಧಿಕಾರ<br>— ವಿಧಾನಸಭೆಯ ನಾಯಕರಾಗಿ ಕಾರ್ಯನಿರ್ವಹಣೆ<br>— ಸರ್ಕಾರದ ನೀತಿ ನಿರೂಪಣೆಯಲ್ಲಿ ಪ್ರಮುಖ ಪಾತ್ರವಹಿಸುತ್ತಾರೆ.<br>(ಯಾವುದಾದರೂ ಆರು ಅಂಶಗಳು) | 3 |
| 45. | ಉಚ್ಚ ನ್ಯಾಯಾಲಯವು ಅಧೀನ ನ್ಯಾಯಾಲಯಗಳ ಮೇಲೆ ಹೇಗೆ ನಿಯಂತ್ರಣ ಹೊಂದಿರುತ್ತದೆ ?<br>***ಉತ್ತರ :***<br>— ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ಅಧೀನ ನ್ಯಾಯಾಲಯದ ಆಡಳಿತ ಸಿಬ್ಬಂದಿಯನ್ನು ನೇಮಕ ಮಾಡುವ ಅಧಿಕಾರ ಹೊಂದಿದ್ದಾರೆ.<br>— ಉಚ್ಚ ನ್ಯಾಯಾಲಯದ ನ್ಯಾಯಾಧೀಶರು ತಮ್ಮ ಆಡಳಿತ ಸಿಬ್ಬಂದಿಯ ಸೇವಾ ನಿಯಮಗಳನ್ನು ರೂಪಿಸುವ ಅಧಿಕಾರವನ್ನು ಹೊಂದಿದ್ದಾರೆ.<br>— ರಾಜ್ಯಪಾಲರ ಅನುಮೋದನೆಯನ್ನು ಪಡೆದು ಉಚ್ಚ ನ್ಯಾಯಾಲಯವು ತನ್ನ ಆಡಳಿತ ಸಿಬ್ಬಂದಿಯ ವೇತನ, ಭತ್ಯೆ, ರಜೆ, ನಿವೃತ್ತಿವೇತನ ಮುಂತಾದ ವಿಷಯಗಳಿಗೆ ಸಂಬಂಧಿಸಿದ ನಿಯಮಗಳನ್ನು ರೂಪಿಸುವ ಅಧಿಕಾರ ಹೊಂದಿದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯ ಮಾಪನ | ಅಂಕಗಳು |
|---|---|---|
| | — ರಾಜ್ಯದಲ್ಲಿರುವ ಎಲ್ಲಾ ನ್ಯಾಯಾಲಯಗಳ ಮೇಲ್ವಿಚಾರಣೆ ಮಾಡಬಹುದು.<br>— ಅಧೀನ ನ್ಯಾಯಾಲಯದಲ್ಲಿನ ಮೊಕದ್ದಮೆಗಳನ್ನು ತನ್ನಲ್ಲಿಗೆ ವರ್ಗಾಯಿಸಿಕೊಳ್ಳಬಹುದು.<br>— ಕೆಳಹಂತದ ನ್ಯಾಯಾಲಯದ ತೀರ್ಪಿನ ವಿರುದ್ಧ ಉಚ್ಚ ನ್ಯಾಯಾಲಯಕ್ಕೆ ಮನವಿ ಸಲ್ಲಿಸಬಹುದು.<br>— ಅಧೀನ ನ್ಯಾಯಾಲಯಗಳು ತಮ್ಮ ಅಧಿಕಾರ ವ್ಯಾಪ್ತಿಮೀರಿ ತೀರ್ಪು ನೀಡದಂತೆ ನೋಡಿಕೊಳ್ಳುವುದು.<br>— ಅಧೀನ ನ್ಯಾಯಾಲಯಗಳ ಮೇರೆ ಉಚ್ಚ ನ್ಯಾಯಾಲಯ ಸಂಪೂರ್ಣ ನಿಯಂತ್ರಣ ಹೊಂದಿದೆ.<br>(ಯಾವುದಾದರೂ ಆರು ಅಂಶಗಳು) | 3 |
| 46. | ರಾಜ್ಯಲೋಕ ಸೇವಾ ಆಯೋಗಗಳ ಕಾರ್ಯಗಳನ್ನು ವಿವರಿಸಿ.<br>***ಉತ್ತರ :***<br>— ರಾಜ್ಯ ಸೇವೆಗಳಿಗೆ ಸೂಕ್ತ ಅಭ್ಯರ್ಥಿಗಳನ್ನು ನೇಮಕ ಮಾಡಲು ಸ್ಪರ್ಧಾತ್ಮಕ ಪರೀಕ್ಷೆಗಳನ್ನು ಏರ್ಪಡಿಸುವುದು.<br>— ನೇಮಕಾತಿ ವಿಧಾನಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು.<br>— ಬಡ್ತಿ ನೀಡಲು ಮತ್ತು ವರ್ಗಾವಣೆಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ಸಲಹೆ ನೀಡುವುದು.<br>— ಸೇವಾವಧಿ ವಿಸ್ತರಣೆ ಹಾಗೂ ನಿವೃತ್ತ ಅಧಿಕಾರಿಗಳ ಮರುನೇಮಕಾತಿಗೆ ಸಂಬಂಧಿಸಿದ ಸಲಹೆಗಳನ್ನು ರಾಜ್ಯ ಸರ್ಕಾರಕ್ಕೆ ನೀಡುವುದು.<br>— ತನ್ನ ಕಾರ್ಯನಿರ್ವಹಣೆಯ ಬಗ್ಗೆ ರಾಜ್ಯಪಾಲರಿಗೆ ವಾರ್ಷಿಕ ವರದಿಯನ್ನು ಸಲ್ಲಿಸುತ್ತದೆ.<br>— ಆಯೋಗವು ರಾಜ್ಯಪಾಲರು ಇಚ್ಛಿಸಿದಲ್ಲಿ ನಾಗರೀಕ ಸೇವಾ ವರ್ಗಕ್ಕೆ ಸಂಬಂಧಿಸಿದ ಯಾವುದೇ ಸಲಹೆಗಳನ್ನು ನೀಡಬಹುದು. | 3 |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| VI. | **ಈ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :** **1 × 4 = 4** | |
| 47. | ಗ್ರಾಮಪಂಚಾಯಿತಿಯ ಕಾರ್ಯಗಳನ್ನು ವಿವರಿಸಿ.<br>***ಉತ್ತರ :***<br>— ಗ್ರಾಮಪಂಚಾಯಿತಿಯಲ್ಲಿ ಹಳ್ಳಿಗಳ ಅಭಿವೃದ್ಧಿಗಾಗಿ ವಾರ್ಷಿಕ ಯೋಜನೆಗಳನ್ನು ಸಿದ್ಧಪಡಿಸುವುದು<br>— ಕೃಷಿ, ಪಶುಸಂಗೋಪನೆ, ಹೈನುಗಾರಿಕೆ, ಮೀನುಗಾರಿಕೆ ಅಭಿವೃದ್ಧಿ<br>— ಗ್ರಾಮೀಣ ಮತ್ತು ಗೃಹ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವುದು<br>— ಕುಡಿಯುವ ನೀರಿನ ಪೂರೈಕೆ ಮತ್ತು ಜಲಮಾಲಿನ್ಯ ನಿಯಂತ್ರಣ<br>— ಬಡತನ ನಿರ್ಮೂಲನಾ ಕಾರ್ಯಕ್ರಮಗಳ ಅನುಷ್ಠಾನ<br>— ಗ್ರಂಥಾಲಯ ನಿರ್ಮಾಣ ಮತ್ತು ನಿರ್ವಹಣೆ<br>— ಹಬ್ಬ ಹರಿದಿನ, ಜಾತ್ರೆ, ದನಗಳ ಜಾತ್ರೆಗಳನ್ನು ನಿಯಂತ್ರಿಸುವುದು<br>— ವಯಸ್ಕರ ಶಿಕ್ಷಣ ಮತ್ತು ಅನೌಪಚಾರಿಕ ಶಿಕ್ಷಣಕ್ಕೆ ಪ್ರೋತ್ಸಾಹ<br>— ಮಹಿಳೆಯರ ಮತ್ತು ಮಕ್ಕಳ ಅಭಿವೃದ್ಧಿ<br>— ಅಸಂಪ್ರದಾಯಿಕ ಇಂಧನ ಮೂಲಗಳನ್ನು ಅಭಿವೃದ್ಧಿ<br>— ಸಾರ್ವಜನಿಕ ಉದ್ಯಾನವನ ಮತ್ತು ಆಟದ ಮೈದಾನಗಳ ಸಂರಕ್ಷಣೆ<br>— ಸಾರ್ವಜನಿಕ ಪಡಿತರ ವಿತರಣಾ ವ್ಯವಸ್ಥೆ ಮೇಲ್ವಿಚಾರಣೆ<br>— ಅಂಗವಿಕಲರ ಯೋಗಕ್ಷೇಮ ನೋಡಿಕೊಳ್ಳುವುದು<br>— ಗ್ರಾಮೀಣ ನೈರ್ಮಲ್ಯಕ್ಕೆ ಪ್ರೋತ್ಸಾಹ<br>— ಮುಂತಾದವು.<br>(ಯಾವುದಾದರೂ ಎಂಟು ಅಂಶಗಳು) | 4 |